### ಅಪೂರ್ವ ಸಂಗತಿಗಳು:

ಚುನಾವಣೆ ಸಂದರ್ಭದಲ್ಲಿ ಭೇಟಿ ನೀಡಿದ ಊರಿನ ಪ್ರಮುಖರ ಮನೆ ಜಗಲಿಯಲ್ಲಿ ಕುಳಿತು ಊರಿನವರೊಂದಿಗೆ ಮಾತನಾಡಿ "ಮತ" ಕೋರುತ್ತಿದ್ದರು. ವಿಧಾನಸಭಾ ಸದಸ್ಯರಾಗಿದ್ದಾಗ ವಿಧಾನಸೌಧದ ಕಲಾಪದ ಬಿಡುವಿನ ವೇಳೆಯಲ್ಲಿ ಗ್ರಂಥಾಲಯದಲ್ಲಿ ಹೆಚ್ಚು ಹೊತ್ತು ಇರುತ್ತಿದ್ದರು.; ಸಾರ್ವಜನಿಕರ ಕೆಲಸದ ನಿಮಿತ್ತ ಬೇರೆಡೆಗೆ ಪ್ರಯಾಣಿಸುವಾಗ ಸ್ವಂತ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಗ್ರಾಮಭಾರತಿ ಪ್ರೌಢಶಾಲೆಯ ಶೈಕ್ಷಣಿಕ ಕಾರ್ಯ ನಿರ್ವಹಣೆ ಸಂದರ್ಭದಲ್ಲಿ ಯಾವುದೇ ಹಂತದಲ್ಲಿಯೂ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ವರ್ಗಾವಣೆ ಅಥವಾ ಇನ್ನಿತರ ಸಂದರ್ಭದಲ್ಲಿ ಶಿಫಾರಸ್ಸು ಮಾಡುವಲ್ಲಿ ಅತ್ಯಂತ ಕಟ್ಟುನಿಟ್ಟಾಗಿ ನಿರ್ವಹಿಸುತ್ತಿದ್ದರು.

### ಕಡೇ ಮಾತು

ಇಂದಿನ ವರ್ತಮಾನದ ರಾಜಕಾರಣದಲ್ಲಿ ಎಸ್.ಎಮ್.ಲಿಂಗಪ್ಪ ಅವರ ನಡವಳಿಕೆಗಳು ಆದರ್ಶವೆನಿಸುತ್ತವೆ. ಅವರೀಗ ಇದ್ದಿದ್ದರೆ ಒಂದು ನೂರು ವರುಷ ತುಂಬುತ್ತಿತ್ತು. ಭೌತಿಕವಾಗಿ ಅವರು 31–08–1990 ರಂದು ಪ್ರಕೃತಿಯೊಂದಿಗೆ ಲೀನವಾದರು. ಅವರ ಸಮಾಧಿ ಒಕ್ಕಲಿಗರ ಸಂಘದ ಒಳಾವರಣದಲ್ಲಿದೆ ಅದನ್ನು ದರ್ಶಿಸುತ್ತಿದ್ದಂತೆಲ್ಲಾ ಎಸ್.ಎಮ್.ಲಿಂಗಪ್ಪ ಅವರು ಇಟ್ಟ ಹೆಜ್ಜೆಗಳ ಸಾಧನಾ ಜ್ಯೋತಿ ಪ್ರಕಾಶಿಸುತ್ತಲೇ ಇರುತ್ತದೆ.



ಶೀಳನೆರೆ ಗ್ರಾಮದಲ್ಲಿರುವ ಎಸ್.ಎಮ್.ಲಿಂಗಪ್ಪ ಅವರ ಮನೆ

ಎಸ್.ಎಮ್.ಲಿಂಗಪ್ಪ ಅವರ ತಂದೆ ಮರೀಗೌಡರ ಜ್ಞಾಪಕಾರ್ಥವಾಗಿ ಶೀಳನೆರೆ ಗ್ರಾಮದಲ್ಲಿರುವ ಕಟ್ಟಿಸಿರುವ ಪಶುವೈದ್ಯಶಾಲಾ.




ಶ್ರೀ ಕುಮಾರಸ್ವಾಮಿ
ನಿವೃತ್ತ ಪ್ರಾಚಾರ್ಯರು
# 323, 8ನೇ ಮೇನ್, 3ನೇ ಕ್ರಾಸ್, ನೇತಾಜಿನಗರ, ಆಲನಹಳ್ಳಿ ಅಂಚೆ,
ಮೈಸೂರು – 28 ಮೊಬೈಲ್ ಸಂಖ್ಯೆ : 9449148885







ಶ್ರೀ ಎಸ್.ಎಮ್.ಲಿಂಗಪ್ಪನವರ ಜನ್ಮ ಶತಮಾನೋತ್ಸವ ಆಚರಣಾ ಸಮಿತಿ
ಗ್ರಾಮಭಾರತಿ ವಿದ್ಯಾಸಂಸ್ಥೆ ಮತ್ತು ಎಸ್.ಎಂ.ಲಿಂಗಪ್ಪ ಚಾರಿಟಬಲ್ ಟ್ರಸ್ಟ್, ಕೃಷ್ಣರಾಜಪೇಟೆ–571426
1918–2018


# ಸಹಕಾರ ಶಿಲ್ಪಿ ಶ್ರೀ ಎಸ್.ಎಮ್.ಲಿಂಗಪ್ಪನವರಿಗೆ–ನೂರರ ನಮನ

## ಪರಿಚಯ ಮಾಹಿತಿ

| | | | |
|---|---|---|---|
| * | ಹೆಸರು | : | ಎಸ್.ಎಮ್.ಲಿಂಗಪ್ಪ |
| * | ಜನ್ಮ ಸ್ಥಳ | : | ಶೀಳನೆರೆ |
| * | ಜನ್ಮ ದಿನಾಂಕ | : | 18:12:1918 |
| * | ತಂದೆ | : | ಮರೀಗೌಡ |
| * | ತಾಯಿ | : | ಮಾದಮ್ಮ |

### ವಿದ್ಯಾಭ್ಯಾಸ

| | | | |
|---|---|---|---|
| * | ಪ್ರಾಥಮಿಕ ಶಿಕ್ಷಣ | : | ಶೀಳನೆರೆ (ಕೂಲಿಮಠ) |
| * | ಪ್ರೌಢ ಶಿಕ್ಷಣ | : | ಮೇಲುಕೋಟೆ |
| * | ಇಂಟರ್ ಮೀಡಿಯಟ್ | : | ಮೈಸೂರು |
| * | ಬಿ.ಎ ಪದವಿ ಶಿಕ್ಷಣ | : | ಮಹಾರಾಜ ಕಾಲೇಜು ಮೈಸೂರು |
| * | ಎಲ್.ಎಲ್.ಬಿ ಕಾನೂನು ಶಿಕ್ಷಣ | : | ಪೂನಾ (ಕೊಲ್ಲಾಪುರ) |
| * | ಉದ್ಯೋಗ | : | ಶ್ರೀರಂಗಪಟ್ಟಣದಲ್ಲಿ ವಕೀಲಿ ವೃತ್ತಿ ಪೂನಾ ಲಿಂಗಪ್ಪ ಎಂದೇ ಹೆಸರಾಗಿದ್ದರು. |
| * | ಪ್ರಭಾವ | : | ಶ್ರೀ ರಾಮಕೃಷ್ಣ ಪರಮಹಂಸ; ವಿವೇಕಾನಂದ; ಮಹಾತ್ಮಗಾಂಧೀಜಿ; ಮೊದಲಾದವರ ಆದರ್ಶಗಳು. |

* ಪ್ರೇರಣೆ : ಶೀಳನೆರೆ ಸಾಹುಕಾರ್ ಎಸ್.ಕೆ.ಚಿಕ್ಕಣ್ಣಗೌಡ ಮತ್ತು ತಮ್ಮೇಗೌಡ (ಎಸ್.ಎಂ.ಲಿಂಗಪ್ಪನವರ ಅಣ್ಣಂದಿರು) ಎಸ್.ಎಮ್.ಲಿಂಗಪ್ಪ ಅವರ ಸಮಗ್ರ ಬೆಳವಣಿಗೆಯ ಮೂಲ ಪ್ರೇರಕರು.

### ಸಾರ್ವಜನಿಕ ಪ್ರವೇಶ

ವಕೀಲಿ ವೃತ್ತಿ ಹಿಡಿಸದ ಕಾರಣ 1950 ರಲ್ಲಿ ಕೃಷ್ಣರಾಜಪೇಟೆಯ ಸಾರ್ವಜನಿಕ ಒಕ್ಕಲಿಗರ ಸಂಘದ ವಿದ್ಯಾರ್ಥಿ ನಿಲಯದ ಅಧ್ಯಕ್ಷರಾಗಿದ್ದ ಅವರ ದೊಡ್ಡಪ್ಪನವರ ಮಗನಾದ ಶೀಳನೆರೆ ಸಾಹುಕಾರ್ ಶ್ರೀ ಎಸ್.ಕೆ.ಚಿಕ್ಕಣ್ಣಗೌಡರ ಒತ್ತಾಯದ ಮೇರೆಗೆ ಸದರಿ ಸಂಘದ ಕಾರ್ಯದರ್ಶಿಯಾಗುವುದರೊಂದಿಗೆ ಸಾರ್ವಜನಿಕ ಸೇವೆಗೆ ಬದ್ಧರಾದರು. ಶ್ರೀಯುತರ ಸರಳ ಜೀವನ ಹಾಗೂ ಮುತ್ಸದ್ದಿತನದಿಂದಾಗಿ ಒಕ್ಕಲಿಗರ ವಿದ್ಯಾರ್ಥಿನಿಲಯ ಪ್ರಸಿದ್ಧಿಯಾಯಿತು.

## ವಿಧಾನಸಭೆ ಪ್ರವೇಶ

ಶೀಳನೆರೆ ಸಾಹುಕಾರ್ ಶ್ರೀ ಎಸ್.ಕೆ.ಚಿಕ್ಕಣ್ಣಗೌಡರು ಮತ್ತು ಅವರ ಅಣ್ಣ ತಮ್ಮೇಗೌಡರ ಪ್ರಯತ್ನದಿಂದಾಗಿ 1952ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಜಯಗಳಿಸಿ ಕೃಷ್ಣರಾಜಪೇಟೆ ಕ್ಷೇತ್ರದ ಮೊತ್ತ ಮೊದಲ ಶಾಸಕರಾಗಿ ಆಯ್ಕೆಯಾದರು. ಯುವ ರಾಜಕಾರಣಿಯಾಗಿ ಅಂದಿನ ಮುಖ್ಯಮಂತ್ರಿಗಳ ಪ್ರಶಂಸೆಗೆ ಪಾತ್ರರಾದರು. ದಿಟ್ಟತನದ ನೇರ ನುಡಿಯ ಶ್ರೀಯುತರು 1952 ರಿಂದ 1957ರವರೆಗೆ ತುಂಬು ಕ್ರಿಯಾಶಾಲಿಗಳಾಗಿ ಉತ್ತಮ ಕಾರ್ಯ ನಿರ್ವಹಿಸಿದರು. ಈ ಕಾರಣದಿಂದಾಗಿಯೇ 1972 ಹಾಗೂ 1978 ರ ವಿಧಾನ ಸಭೆ ಚುನಾವಣೆಯಲ್ಲಿ ಆಯ್ಕೆಯಾಗಿ ಧೀಮಂತ ರಾಜಕಾರಣಿ ಎಂದು ಜನಪ್ರಿಯರಾದರು. ಕೃಷ್ಣರಾಜಪೇಟೆಯ ವಿಧಾನಸಭಾ ಕ್ಷೇತ್ರದಲ್ಲಿ 16 ಚುನಾವಣೆಗಳು ನಡೆದಿವೆ ಇದರಲ್ಲಿ ಮೂರು ಭಾರಿ ಆಯ್ಕೆಗೊಂಡ ಎಸ್.ಎಮ್.ಲಿಂಗಪ್ಪ ಅವರ ಸಾಧನೆಗಳು ಮಾರ್ಗದರ್ಶಿ ಪ್ರಾಯವಾದುದಾಗಿದೆ.

## ಸಾಧನೆಗಳು

* 1952ರಿಂದ 1957 ರ ಅವಧಿಯಲ್ಲಿ ಶಾಸಕರಾಗಿ ನಮ್ಮ ತಾಲ್ಲೂಕಿನ ಕೃಷಿ ಕ್ಷೇತ್ರದಲ್ಲಿ ಹಾಗೂ ಕೆರೆಗಳ ಅಭಿವೃದ್ಧಿಗಾಗಿ ಶ್ರಮಿಸಿದರು.
* ಕೃಷ್ಣರಾಜಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ನೂರು ಹಾಸಿಗೆಗಳ ಸೌಲಭ್ಯಕ್ಕಾಗಿ ಶ್ರಮಿಸಿದರು.
* ತಮ್ಮ ಹುಟ್ಟೂರಾದ ಶೀಳನೆರೆ ಗ್ರಾಮದಲ್ಲಿ ಪಶುವೈದ್ಯ ಚಿಕಿತ್ಸಾಲಯವನ್ನು ತಮ್ಮ ತಂದೆ ಮರೀಗೌಡರ ಜ್ಞಾಪಕಾರ್ಥವಾಗಿ ಕಟ್ಟಿಸಿದ್ದಾರೆ.
* ಮಂಡ್ಯ ಜಿಲ್ಲಾ ಸಹಕಾರ ಬ್ಯಾಂಕ್ ಹಾಗೂ ಪಾಂಡವಪುರದ ಪಿ.ಎಸ್.ಎಸ್.ಕೆ ಸಕ್ಕರೆ ಕಾರ್ಖಾನೆಗಳ ಸ್ಥಾಪಕ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು.
* 1957–77 ರ ಅವಧಿಯಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿಯು ಕಾರ್ಯ ನಿರ್ವಹಿಸಿದರು
* ಎಂ.ಡಿ.ಸಿ.ಸಿ. ಬ್ಯಾಂಕ್ ಶಾಖೆಗಳನ್ನು ಆರಂಭಿಸಿ ರೈತರಿಗೆ ಕೃಷಿ ಸಾಲ ನೀಡಲು ಕ್ರಮವಹಿಸಿದರು.
* ಕೃಷ್ಣರಾಜಪೇಟೆಯಲ್ಲಿ ಟಿ.ಎ.ಪಿ.ಸಿ.ಎಂ.ಎಸ್.ನಿ. ಆರಂಭಿಸಿ ಅದರ ಅಧ್ಯಕ್ಷರಾಗಿ ಸರ್ಕಾರದ ಯಾವುದೇ ಸಹಾಯಧನ ಪಡೆಯದೆ ತನ್ನ ಸ್ವಂತ ಶಕ್ತಿಯಿಂದ ಸಂಸ್ಥೆಯಲ್ಲಿ ಅಕ್ಕಿಗಿರಣಿಯನ್ನು ಪ್ರಾರಂಭಿಸಿ ತಾಲ್ಲೂಕಿನ ರೈತಾಪಿ ವರ್ಗದ ಸಮಗ್ರ ಬೆಳವಣಿಗೆಗೆ ಶ್ರಮಿಸಿದರು. ಇವರ ಕಾಲದಲ್ಲಿ ಸಂಸ್ಥೆಯು ರಾಜ್ಯದಲ್ಲಿಯೇ ಪ್ರಸಿದ್ಧಿಯಾಗಿತ್ತು.
* ಕೃಷ್ಣರಾಜಪೇಟೆ ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿ ಸಮಗ್ರ ಕ್ಷೇತ್ರದ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿ ಯಶಸ್ವಿಯಾದರು.
* ತಾಲ್ಲೂಕು ಭೂನ್ಯಾಯ ಮಂಡಳಿಯ ಅಧ್ಯಕ್ಷರಾಗಿದ್ದ ವೇಳೆ ಹಲವಾರು ಭೂ ರಹಿತ ರೈತರಿಗೆ ದರ್ಖಾಸ್ತು ಜಮೀನನ್ನು ಮಂಜೂರು ಮಾಡಿ ಅವರ ಬಾಳನ್ನು ಬೆಳಗಿದ್ದಾರೆ.
* ಕೃಷ್ಣರಾಪೇಟೆ ತಾಲ್ಲೂಕು ಒಕ್ಕಲಿಗರ ಸಂಘದ ಕಾರ್ಯದರ್ಶಿಯಾಗಿ 1950–75ರವರೆಗೆ ಹಾಗೂ 1975–90ರವರೆಗೆ ಅಧ್ಯಕ್ಷರಾಗಿ ಸಂಘದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿ ಗಾಗಿ ಶ್ರಮಿಸಿದರು.



## ಗ್ರಾಮಭಾರತಿ ವಿದ್ಯಾಸಂಸ್ಥೆ :

ಮಂಡ್ಯದ ಕೆ ವಿ ಶಂಕರೇಗೌಡ ; ಪಾಂಡವಪುರದ ನೀಲೇಗೌಡ ಹಾಗೂ ನಾಗಮಂಗಲದ ಕೆ.ಸಿಂಗಾರಿಗೌಡ ಮೊದಲಾದವರ ಒಡನಾಟಗಳ ಪ್ರಭಾವದಿಂದಾಗಿ ಕೃಷ್ಣರಾಜಪೇಟೆ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗಾಗಿ ಎಸ್.ಎಮ್.ಲಿಂಗಪ್ಪನವರು 20–06–1975 ರಂದು ಗ್ರಾಮಭಾರತಿ ವಿದ್ಯಾಸಂಸ್ಥೆಯನ್ನು ಆರಂಭಿಸಿದರು. ತನ್ಮೂಲಕ ತಾಲ್ಲೂಕಿನ ಬಡವರ ಪಾಲಿಗೆ ಶೈಕ್ಷಣಿಕವಾಗಿ ಆಶಾಕಿರಣವಾದರು. ಇಂದು ಗ್ರಾಮಭಾರತಿ ವಿದ್ಯಾಸಂಸ್ಥೆ ರಾಜ್ಯದ ಮಾದರಿ ಸಂಸ್ಥೆಯಾಗಿ ಪ್ರಸಿದ್ಧಿಯಾಗಿದೆ. ಈ ಸಂಸ್ಥೆಯ ಸಾರಥ್ಯವನ್ನು ಎಸ್.ಎವ್.ಲಿಂಗಪ್ಪನವರ ನಂತರ ಅವರ ಅಣ್ಣ ಶೀಳನೆರೆ ಸಾಹುಕಾರ್ ಎಸ್.ಕೆ.ಚಿಕ್ಕಣ್ಣಗೌಡರ ಮಗನಾದ ದಿ.ಎಸ್.ಸಿ. ಚಿಕ್ಕಣ್ಣಗೌಡರು ವಹಿಸಿಕೊಂಡು; ಮೈಸೂರು–ಚನ್ನರಾಯಪಟ್ಟಣ ಮುಖ್ಯ ರಸ್ತೆಯಲ್ಲಿರುವ ವಿಸ್ತಾರವಾದ ಪರಿಸರದಲ್ಲಿ ವಿದ್ಯಾಸಂಸ್ಥೆಯನ್ನು ಸುಸಜ್ಜಿತವಾಗಿ ನಿರ್ಮಿಸಿ ಮುನ್ನಡೆಸಿದರು. ಇವರ ನಂತರ ಹಾಲಿ ಅಧ್ಯಕ್ಷರಾಗಿ ಎಸ್.ಸಿ.ಕಿರಣ್‌ಕುಮಾರ್ ಹೊಸ ಹೊಸ ಆಯಾಮದಲ್ಲಿ ಗ್ರಾಮಭಾರತಿ ವಿದ್ಯಾಸಂಸ್ಥೆಯನ್ನು ಸಕ್ರಿಯವಾಗಿ ಮುನ್ನಡೆಸುತ್ತಿದ್ದಾರೆ.

## ಎಸ್.ಎಮ್.ಲಿಂಗಪ್ಪ ಅವರ ವ್ಯಕ್ತಿತ್ವ :

ಕರ್ನಾಟಕದ ರಾಜಕಾರಣದ ಚರಿತ್ರೆಯಲ್ಲಿ ಎಸ್.ಎಮ್.ಲಿಂಗಪ್ಪ ಅವರಿಗೆ ವಿಶಿಷ್ಟ ಸ್ಥಾನವಿದೆ. ಬ್ರಹ್ಮಚಾರಿಯಾಗಿ ಹಾಗೂ ಪ್ರಜಾ ಪ್ರತಿನಿಧಿಗಳಾಗಿ ಶುದ್ಧಹಸ್ತರೆನಿಸಿ 72 ವರ್ಷ ನಿಷ್ಕಳಂಕವಾಗಿ ಬದುಕಿ ಬಾಳಿದವರು. ಎಸ್.ಎಮ್.ಲಿಂಗಪ್ಪ ಅವರು ಖಾದಿಧಾರಿಗಳಾಗಿ ಹಾಗೂ ಗಾಂಧಿ ತತ್ವಾನುಶೀಲರಾಗಿ ಅವರ ನಡವಳಿಕೆ ಆದರ್ಶ ಪ್ರಾಯವಾದುದು. ಮಾತು ಒರಟಾಗಿದ್ದರೂ... ಮುಂಗೋಪವಿದ್ದರೂ... ಸುಳ್ಳು–ಕಪಟ–ಲಂಚದ ವಿಷಯದಲ್ಲಿ ತೀವ್ರ ಅಸಹನೆಗೊಳ್ಳುತ್ತಿದ್ದರೂ... ದೂರ ದೃಷ್ಟಿಯ ಆಲೋಚನೆ ಅಪ್ಪಟವಾದುದು. ಸೇವಾ ಸಹಕಾರ ಸಂಸ್ಥೆ ಹಾಗೂ ಅನೇಕ ಕಠೋರ ಸವಾಲುಗಳನ್ನು ಒಂಟಿಯಾಗಿ ಎದುರಿಸಿ ಯಶಸ್ವಿಯಾದರು. ಎಸ್.ಎಮ್.ಲಿಂಗಪ್ಪನವರಿಗೆ ಒತ್ತಾಸೆಯಾಗಿದ್ದ ಹೊಸಹೊಳಲಿನ ಗೋವಿಂದೇಗೌಡರು; ನಾಟನಹಳ್ಳಿಯ ಸಿದ್ಲಿಂಗೇಗೌಡರು; ಕರೋಟಿ ಹುಚ್ಚೇಗೌಡರು, ಕಡಹೆಮ್ಮಿಗೆಯ ಕಾಳೇಗೌಡರು; ಐಚನಹಳ್ಳಿಯ ಬಾಳೇಗೌಡರು, ಐನೋರಳ್ಳಿ ನಂಜುಂಡೇಗೌಡರು, ಅಕ್ಕಿಹೆಬ್ಬಾಳ್ ಪಟೇಲ್ ಲಿಂಗೇಗೌಡರು, ಕಾಂತರಾಜಪುರದ ಪಟೇಲ್ ಕೆಂಗೇಗೌಡರು, ನಾಯಕನಹಳ್ಳಿ ಗೌಡೇಗೌಡರು: ಶಂಭುಲಿಂಗೇಗೌಡರು; ಬೋಳೇಗೌಡರು, ಮರಡಹಳ್ಳಿ ಗಿರೀಗೌಡರು, ಮಡುವಿನಕೋಡಿ ಸಿದ್ದೇಗೌಡರು, ಗುಡ್ಡೇನಳ್ಳಿ ಕಾಳೇಗೌಡರು; ಮತ್ತೀಕೆರೆ ಕಾಳೇಗೌಡರು ಮೊದಲಾದವರು ಪ್ರಮುಖರಾಗಿದ್ದಾರೆ.

## ನಿತ್ಯ ದಿನಚರಿಗಳು

ಗ್ರಾಮಭಾರತಿ ವಿದ್ಯಾಸಂಸ್ಥೆ ಆರಂಭಿಸಿ ಅದರ ಅಭಿವೃದ್ಧಿ ಕಾರ್ಯಗಳನ್ನು ನಿರಂತರವಾಗಿ ಶಾಲೆಯಲ್ಲಿದ್ದು ಕೈಗೊಂಡರು. ಮುಂಜಾನೆ ಪ್ರಾತಃವಿಧಿಗಳನ್ನು ಮುಗಿಸಿ, ಸ್ನಾನ–ಧ್ಯಾನಗಳನ್ನು ಮುಗಿಸಿ ಉಪಹಾರವಾದ ನಂತರ ಪತ್ರಿಕೆಗಳನ್ನು ಕೂಲಂಕುಶವಾಗಿ ಓದುತ್ತಿದ್ದರು. ಅನಂತರ ಶಾಲಾ ಮುಂಭಾಗದಲ್ಲಿ ಕುಳಿತು ಬಂದವರೊಡನೆ ಮಾತನಾಡುತ್ತಿದ್ದರು. ಸಂಜೆಯಾದಂತೆ ಕೊಠಡಿಯಲ್ಲಿ ಓದುವುದರೊಂದಿಗೆ ವಿಶ್ರಮಿಸುತ್ತಿದ್ದರು.